ಕರ್ನಾಟಕ ಸರ್ಕಾರ

**ಮಕ್ಕಳ ರಕ್ಷಣಾ ನಿರ್ದೇಶನಾಲಯ**

C/o . ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ, ಬಹು ಮಹಡಿಗಳಕಟ್ಟಡ,
ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001, ಕರ್ನಾಟಕ

**E-mail ID: icps.kar@gmail.com** **Ph.No.080-22879382**


ಸಂಖ್ಯೆ:ಕೆಎಸ್ಐಸಿಪಿಎಸ್/ಜೆಜೆಬಿ/ಬಾ.ನ್ಯಾ.ಮಂ/20/2020-21 ದಿನಾಂಕ: 05-12-2020

## ಸುತ್ತೋಲೆ

ವಿಷಯ: ಬಾಲನ್ಯಾಯ ಮಂಡಳಿಗಳಲ್ಲಿ ಪ್ರಮುಖ ದೂರವಾಣಿ ಸಂಖ್ಯೆಗಳ ಪಟ್ಟಿಯನ್ನು ಪ್ರದರ್ಶಿಸುವ ಹಾಗೂ Free Legal Services Clinic ರವರು ಕುಳಿತುಕೊಳ್ಳಲು ಒಂದು ಪ್ರತ್ಯೇಕವಾದ ಸ್ಥಳಾವಕಾಶವನ್ನು ಹಾಗೂ ಅವಶ್ಯಕ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕುರಿತು.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಪ್ರತೀ ಬಾಲನ್ಯಾಯ ಮಂಡಳಿಗಳಲ್ಲಿ ಎಲ್ಲಾ ಪದನಿಮಿತ್ತ ಶಿಶು ಕಲ್ಯಾಣ ಪೊಲೀಸ್ ಅಧಿಕಾರಿಗಳು(Child Welfare Police Officers), ಶಿಶು ಕಲ್ಯಾಣಾಧಿಕಾರಿಗಳು (Child Welfare Officers), ಪ್ರೊಬೇಷನ್ ಅಧಿಕಾರಿಗಳು, ಅರೆ ಕಾನೂನು ಸ್ವಯಂಸೇವಕರು (Para Legal Volunteers), ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಗಳು ಮತ್ತು ಜಿಲ್ಲೆಯ ನೋಂದಾಯಿತ ಸ್ವಯಂ ಸೇವಾ ಮತ್ತು ಸರ್ಕಾರೇತರ ಸಂಸ್ಥೆಗಳು, ಮಂಡಳಿಯ ಪ್ರಾಧಾನ ದಂಡಾಧಿಕಾರಿ ಮತ್ತು ಸದಸ್ಯರುಗಳು, ಮಕ್ಕಳ ವಿಶೇಷ ಪೋಲೀಸ್ ಘಟಕ (ಎಸ್‌ಜೆಪಿಯು) ಮತ್ತು ಶಿಶು ಸೇವಾ ಘಟಕಗಳ ದೂರವಾಣಿ ಸಂಖ್ಯೆಗಳನ್ನೊಳಗೊಂಡ ಪಟ್ಟಿಯನ್ನು ಎಲ್ಲಾ ಬಾಲನ್ಯಾಯ ಮಂಡಳಿಗಳ ಸಭೆ ನಡೆಯುವ ಸ್ಥಳಗಳಲ್ಲಿ ಪ್ರಧಾನವಾಗಿ ಕಾಣುವಂತೆ ಪ್ರದರ್ಶಿಸತಕ್ಕದ್ದು.

ಅಲ್ಲದೆ ಪ್ರತೀ ಬಾಲನ್ಯಾಯ ಮಂಡಳಿಗಳಲ್ಲಿ Free Legal Services Clinic ನವರು ಕುಳಿತುಕೊಳ್ಳಲು ಒಂದು ಪ್ರತ್ಯೇಕವಾದ ಸ್ಥಳಾವಕಾಶ ಮತ್ತು ಸಮಾಲೋಚನಾ ಕೊಠಡಿ ಹಾಗೂ ಅವಶ್ಯಕ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡುವುದು, ಆ ಮೂಲಕ ಸದರಿಯವರ ಸೇವೆಯನ್ನು ಮಕ್ಕಳು ಪಡೆಯುವಂತೆ ಮಾಡುವುದು.

ಬಾಲನ್ಯಾಯ ಮಂಡಳಿಗಳಿಗೆ ಪ್ರಕರಣಗಳಿಗೆ ಹಾಜರಾಗಲು ಬರುವ ಕಾನೂನು ಸಂಘರ್ಷಕ್ಕೊಳಗಾದ ಮಕ್ಕಳಿಗೆ, ಸಾಕ್ಷಿಗಳಿಗೆ ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸುವುದರ ಜೊತೆಗೆ ಕೊಠಡಿಗಳನ್ನು ಮಕ್ಕಳ ಸ್ನೇಹಿಯಾಗಿ ಕಾಣುವಂತೆ ಪೈಟಿಂಗ್ಸ್ ಮತ್ತು ಪೋಸ್ಟರ್‌ಗಳನ್ನು ಹಾಕುವುದು.

ಮೇಲೆ ತಿಳಿಸಲಾದ ಅಂಶಗಳ ಕುರಿತು ತುರ್ತಾಗಿ ಕ್ರಮ ತೆಗೆದುಕೊಂಡು, ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು (ಫೋಟೋ ಸಮೇತ) ಈ ಕಚೇರಿಗೆ ಸಲ್ಲಿಸಲು ತಿಳಿಸಿದೆ.

05.12.2020

ನಿರ್ದೇಶಕರು
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಬೆಂಗಳೂರು

ಪ್ರತಿಯನ್ನು

1. [redacted] ಬಾಲನ್ಯಾಯ ಮಂಡಳಿಗಳು. ಎಲ್ಲಾ ಜಿಲ್ಲೆಗಳು
2. ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಎಲ್ಲಾ ಜಿಲ್ಲೆಗಳು
3. ಕಚೇರಿ ಕಡತಕ್ಕೆ